# ಗುಣಮಟ್ಟದ ಶಿಕ್ಷಣದತ್ತ ಹೆಜ್ಜೆ ಇಡುತ್ತಾ

**ಮನೋಜ್ ಕುಮಾರ್ ತ್ರಿಪಾಠಿ**



ಶಿಕ್ಷಣವು ಸಮಾಜದ ಪ್ರಮುಖ ಕಾಳಜಿಯಾಗಿದೆ. ಸ್ವಾಭಾವಿಕವಾಗಿ ವ್ಯಕ್ತಿಗಳಾಗಿ ಮತ್ತು ಸಮಾಜವಾಗಿ ನಾವು ಯಾವಾಗಲೂ ವ್ಯಕ್ತಿಯ ಮತ್ತು ಅಂತಿಮವಾಗಿ ಸಮಾಜದ ಸಮಗ್ರ ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ಸುಗಮವಾಗಿಸುವ ಉತ್ತಮ ಶಿಕ್ಷಣದ ಬಗ್ಗೆ ಯೋಚಿಸುತ್ತೇವೆ. ಇಂದು ಗುಣಮಟ್ಟದ ಶಿಕ್ಷಣ ಎಂಬ ಪದವು ವೇಗವನ್ನು ಪಡೆದುಕೊಂಡಿದೆ ಮತ್ತು ಶಿಕ್ಷಣ ತಜ್ಞರು ಮತ್ತು ಸಾಮಾನ್ಯ ಜನರಲ್ಲಿ ಕಾಳಜಿಯ ಮತ್ತು ಚರ್ಚಾಸ್ಪದ ವಿಷಯವಾಗಿದೆ. ವಾಸ್ತವವಾಗಿ ಶಿಕ್ಷಣ ಎಂಬ ಪದವೇ ಸ್ವರೂಪದಲ್ಲಿ ಮತ್ತು ಫಲಿತಾಂಶದಲ್ಲಿ ಗುಣಾತ್ಮಕವಾದದ್ದು. ಹಾಗಾಗಿ, ಇಲ್ಲಿ ಚರ್ಚಿಸಬೇಕಾದ ಅಥವಾ ಕಾಳಜಿ ತೋರಬೇಕಾದ ವಿಷಯವೆಂದರೆ, ಶೈಕ್ಷಣಿಕ ಪ್ರಕ್ರಿಯೆ, ವಿಷಯಗಳು ಇತ್ಯಾದಿಗಳು. ಅದೇನೇ ಇರಲಿ, ಗುಣಮಟ್ಟದ ಶಿಕ್ಷಣವು, ವಿಶೇಷವಾಗಿ ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ, ದೊರೆಯುತ್ತಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಹಲವು ಹಸ್ತಕ್ಷೇಪಗಳು ಮತ್ತು ನವೀನ ಆಲೋಚನೆಗಳನ್ನು ವಿವಿಧ ಹಂತಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ ಮತ್ತು ಆಚರಣೆಗೆ ತರಲಾಗುತ್ತಿದೆ ಎಂಬುದು.

ನಮ್ಮ ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣದಲ್ಲಿ ತೊಡಗಿರುವ ಶಿಕ್ಷಕರ ನಿರಂತರ ವೃತ್ತಿಪರ ಅಭಿವೃದ್ಧಿಗಾಗಿ, ಮತ್ತು ಗುಣಮಟ್ಟದ ಶಿಕ್ಷಣವನ್ನು ಖಚಿತಪಡಿಸಿಕೊಳ್ಳಲಿಕ್ಕಾಗಿ ಅವರ ವೃತ್ತಿಪರ ಅವಶ್ಯಕತೆಗಳನ್ನು ಹಾಗೂ ಸವಾಲುಗಳನ್ನು ಪೂರೈಸಲು ಇಪ್ಪತ್ತೈದಕ್ಕೂ ಹೆಚ್ಚು ಕ್ಷೇತ್ರಗಳನ್ನು ಗುರುತಿಸಲಾಗಿದೆ. ಇದಲ್ಲದೆ, ತರಗತಿಯನ್ನು ಆಕರ್ಷಕವಾಗಿಸುವುದು, ತರಗತಿಯ ಚಟುವಟಿಕೆಗಳಲ್ಲಿ ಪರಿಣಾಮಕಾರಿತ್ವ ಮತ್ತು ಲವಲವಿಕೆಯನ್ನು ಮೂಡಿಸುವುದು ಮತ್ತು ಮುಖ್ಯವಾಗಿ, ಮಕ್ಕಳಿಗೆ ಅವರ ಜ್ಞಾನವನ್ನು ನಿರ್ಮಿಸಲು ಅನುಕೂಲಕರ ವಾತಾವರಣವನ್ನು ಒದಗಿಸುವುದು ಇದರ ಗುರಿಯಾಗಿದೆ.

ಕಲೆ ಸಂಯೋಜಿತ ಕಲಿಕೆಯಂತಹ ನಿರಂತರ ವೃತ್ತಿಪರ ಅಭಿವೃದ್ಧಿ ಕಾರ್ಯಕ್ರಮಗಳು, ಸಾಕ್ಷರತೆ, ಸಂಖ್ಯಾಜ್ಞಾನ, ವಿನೋದಮಯ ವಿಧಾನದಲ್ಲಿ ಇಂಗ್ಲಿಷ್ ಕಲಿಸುವುದು ಇವೇ ಮುಂತಾದ ಶಾಲಾ ಸಿದ್ಧತಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದ್ದು ಈ ಕಾರ್ಯಕ್ರಮಗಳು ಗುಣಮಟ್ಟದ ಶೈಕ್ಷಣಿಕ ಅಗತ್ಯಗಳನ್ನು ಪೂರೈಸುವಲ್ಲಿ ಸಾಕಷ್ಟು ಪರಿಣಾಮಕಾರಿಯಾಗಿದೆ ಮತ್ತು ಸಹಾಯಕಾರಿಯಾಗಿದೆ ಎಂದು ಸಾಬೀತಾಗಿದೆ.

ಕಲೆ-ಸಂಯೋಜಿತ ಕಲಿಕಾ ಕಾರ್ಯಕ್ರಮ (ಆರ್ಟ್-ಇಂಟಿಗ್ರೇಟೆಡ್ ಲರ್ನಿಂಗ್ ಪ್ರೋಗ್ರಾಂ-ಎಐಎಲ್) ಎನ್‌ಸಿಇಆರ್‌ಟಿಯ ಪ್ರಮುಖ ಕಾರ್ಯಕ್ರಮಗಳಲ್ಲಿಒಂದಾಗಿದೆ. ಬಿಹಾರದ ಎಸ್‌ಸಿಇಆರ್‌ಟಿಯ ಉಪಕ್ರಮವಾಗಿ ಮತ್ತು ಯೂನಿಸೆಫ್‌ನ ಬೆಂಬಲದೊಂದಿಗೆ ಇದನ್ನು 2013ರಲ್ಲಿ ಬಿಹಾರದಲ್ಲಿ ಪರಿಚಯಿಸಲಾಯಿತು. ಎನ್‌ಸಿಇಆರ್‌ಟಿ ಪರಿಣಿತ ಸಂಪನ್ಮೂಲ ತಂಡದಿಂದ ಮಾಸ್ಟರ್ ತರಬೇತುದಾರರ ಬ್ಯಾಚ್‌ಗಳಿಗೆ ತರಬೇತಿ ನೀಡಲಾಯಿತು. ಅಂದಿನಿಂದ ಕಲೆ-ಸಂಯೋಜಿತ ಕಲಿಕಾ ಕಾರ್ಯಕ್ರಮವನ್ನು ತೀಕ್ಷ್ಣವಾಗಿ ಹೆಚ್ಚಿಸಲಾಯಿತು ಮತ್ತು ಈಗ ಅದು ನಿರಂತರ ವೃತ್ತಿಪರ ಅಭಿವೃದ್ಧಿಯ ಪ್ರಮುಖಭಾಗವಾಗಿದೆ. ಆರಂಭದಲ್ಲಿ ಇದನ್ನು ಪ್ರತಿಯೊಂದು ಜಿಲ್ಲೆಯ ತಲಾ 10 ಶಾಲೆಗಳಂತೆ 20 ಜಿಲ್ಲೆಗಳಲ್ಲಿ, ಒಟ್ಟು 200 ಶಾಲೆಗಳಲ್ಲಿ ಸಂಪೂರ್ಣ ಬೆಂಬಲ ಮತ್ತು ಉತ್ಸಾಹದೊಂದಿಗೆ ಪ್ರಾರಂಭಿಸಲಾಯಿತು. ಶಿಕ್ಷಕರು, ಸಿಆರ್‌ಸಿಸಿ (ಕ್ಲಸ್ಟರ್ ರಿಸೋರ್ಸ್ ಸೆಂಟರ್ ಕೋ-ಆರ್ಡಿನೇಟರ್), ಬಿಆರ್‌ಪಿಗಳು (ಬ್ಲಾಕ್ ರಿಸೋರ್ಸ್ ಪರ್ಸನ್) ಕಲೆ-ಸಂಯೋಜಿತ ಕಲಿಕಾ ಕಾರ್ಯಕ್ರಮದ ಬೋಧನಾ ಕ್ರಮದಲ್ಲಿ ತರಬೇತಿ ನೀಡಿದರು. ಪ್ರಚಲಿತ ಪರಿಸ್ಥಿತಿಯ ದೃಷ್ಟಿಕೋನದಲ್ಲಿ ನೋಡಿದಾಗ ಫಲಿತಾಂಶವು ಸಾಕಷ್ಟು ಧನಾತ್ಮಕವಾಗಿಯೇ ಇದೆ. ವಾಸ್ತವವಾಗಿ ಕಲಿಕೆಯ ಪ್ರಕ್ರಿಯೆಯಲ್ಲಿ ಕಲೆಯನ್ನು ಏಕೀಕರಣಗೊಳಿಸಿರುವುದು ಶಾಲೆಗಳಲ್ಲಿ ಸ್ನೇಹಪರ ಮತ್ತು



ಸಂತೋಷದಾಯಕ ವಾತಾವರಣ ಸೃಷ್ಟಿಸಿರುವುದು ಮಾತ್ರವಲ್ಲ, ಬದಲಾಗಿ ತರಗತಿಯ ಚಟುವಟಿಕೆಗಳಲ್ಲಿ ಚೈತನ್ಯ ಮತ್ತು ಆಕರ್ಷಣೆಯನ್ನು ಮರಳಿ ತರುವ ಕ್ರಿಯಾತ್ಮಕ ಮತ್ತು ಶಿಕ್ಷಣ ಪ್ರಕ್ರಿಯೆಯಾಗಿಯೂ ಸಹ ಸ್ಥಾಪಿತಗೊಂಡಿದೆ. ಮಕ್ಕಳ ಹಾಜರಾತಿ, ಒಳಗೊಳ್ಳುವಿಕೆ ಮತ್ತು ಭಾಗವಹಿಸುವಿಕೆ ಹಲವು ಪಟ್ಟು ಹೆಚ್ಚಾಗಿದೆ. ಶಾಲಾ ವಾತಾವರಣದಲ್ಲಿ ಕಂಡುಬರುವ ಮೊದಲ ಮತ್ತು ಪ್ರಮುಖ ಬದಲಾವಣೆಯೆಂದರೆ, ರೋಮಾಂಚಕವಾದ ಚೇತನ ಸತ್ರ (ಬೆಳಗಿನ ಸಭೆ).

ಬಾಲಸಂಸದ್ ಮತ್ತು ತರಬೇತಿ ಪಡೆದ ಶಿಕ್ಷಕರ ಸಮರ್ಥ ನಾಯಕತ್ವದಲ್ಲಿ ಮಕ್ಕಳು ನಿಯಮಿತವಾದ ಲಯಬದ್ಧ ಶೈಲಿಯಲ್ಲಿ ಮತ್ತು ವಿಭಿನ್ನ ಶೈಲಿಯಲ್ಲಿ ವಿವಿಧ ಆಕಾರಗಳನ್ನು ಮಾಡುತ್ತಿದ್ದಾರೆ. ನಾಡಗೀತೆ ಮತ್ತು ರಾಷ್ಟ್ರಗೀತೆಯ ಜೊತೆಗೆ, ಚೇತನ ಸತ್ರದಲ್ಲಿ ಅವರು ಉತ್ಸಾಹದಿಂದ ಭಕ್ತಿಗೀತೆ ಮತ್ತು ಅವರ ಸಂಸ್ಕೃತಿಯ ಸಾರವಾದ ಸ್ಥಳೀಯ ಜಾನಪದ ಗೀತೆಗಳನ್ನು ಹಾಡುತ್ತಾರೆ. ಸುದ್ದಿ ಓದುವುದು, ಸ್ಥಳೀಯ ಸುದ್ದಿಗಳನ್ನು ರಚಿಸುವುದು ಮತ್ತು ಸಂಗ್ರಹಿಸುವುದು, ಕವನ ವಾಚನ, ಪ್ರೇರಣಾತ್ಮಕ ಮಾತುಗಳು, ಜನ್ಮದಿನ ಮತ್ತು ಶುಭದಿನಗಳು, ಸಾಮಾಜಿಕ ಮತ್ತು ಸಾಂಸ್ಕೃತಿಕ ಆಚರಣೆಗಳೆಲ್ಲವೂ ಬೆಳಗಿನ ಸಭೆಯ ಸಾಮಾನ್ಯ ಲಕ್ಷಣಗಳಾಗಿ ಬಿಟ್ಟಿವೆ. ಆಶ್ಚರ್ಯಕರ ವಿಷಯವೆಂದರೆ, ಚೇತನ ಸತ್ರದ ಚಟುವಟಿಕೆಗಳನ್ನು ಒಂದಲ್ಲಾ ಒಂದು ರೀತಿಯಾಗಿ ವಿಭಿನ್ನ ವಿಷಯಗಳು, ಪರಿಕಲ್ಪನೆಗಳು ಮತ್ತು ತರಗತಿ ಚಟುವಟಿಕೆಗಳೊಂದಿಗೆ ಸುಲಭವಾಗಿ ಸಂಯೋಜಿಸಲಾಗುವಂತೆ ವಿನ್ಯಾಸಗೊಳಿಸಲಾಗಿದೆ.

ಉದಾಹರಣೆಗೆ, ಒಂದು ದಿನ ಮಕ್ಕಳು ಯಾವುದೇ ನಿರ್ದಿಷ್ಟ ಆಕಾರ ಅಥವಾ ವಿನ್ಯಾಸದಲ್ಲಿ ನಿಂತಿದ್ದರೆ, ಅದು 1 ರಿಂದ 8ನೇ ತರಗತಿಯ

ಮಕ್ಕಳ ಪಠ್ಯದಲ್ಲಿ ಬರುವ ಆಕಾರ, ಗಾತ್ರ ಮತ್ತು ಆಯಾಮದ ಬಗ್ಗೆ ಚರ್ಚಿಸುವ ಮತ್ತು ತಿಳುವಳಿಕೆಯನ್ನು ಹುಟ್ಟುಹಾಕುವ ಅಂಶವಾಗಿರಬಹುದು. ಪ್ರಾಥಮಿಕ ತರಗತಿಗಳ ಪಾಲಿಗೆ ಅದು ಅವಲೋಕನ, ಗುರುತಿಸುವಿಕೆ, ಸಮೀಕರಣ, ವರ್ಗೀಕರಣ, ಇತ್ಯಾದಿ ವಿಷಯವಾದರೆ, ಉನ್ನತ ವರ್ಗಗಳಿಗೆ ಅದು ಆಯಾಮ, ವಿಸ್ತೀರ್ಣ, ಮಾಪನ ಮುಂತಾದವುಗಳನ್ನು ಅರ್ಥಮಾಡಿಸುವ ವಿಷಯವಾಗಿರುತ್ತದೆ.

ಸ್ಥಳೀಯ ಕಲೆ ಮತ್ತು ಸಾಂಸ್ಕೃತಿಕ ಘಟಕಗಳನ್ನು ಹೇರಳವಾದ ಸ್ಥಳೀಯ ಸಂಪನ್ಮೂಲಗಳೊಂದಿಗೆ ಸಂಯೋಜಿಸಲು ಕಲೆ–ಸಂಯೋಜಿತ ಕಲಿಕಾ ಕಾರ್ಯಕ್ರಮ ಸಾಕಷ್ಟು ವ್ಯಾಪ್ತಿ ಮತ್ತು ಅವಕಾಶವನ್ನು ಒದಗಿಸುತ್ತದೆ. ಈ ಕಾರ್ಯಕ್ರಮ ಒಳಗೊಂಡಿರುವ ಬಣ್ಣಗಳು ಮತ್ತು ಕ್ರಯೋನ್‌ಗಳು, ಮರಳು ಮತ್ತು ಜೇಡಿಮಣ್ಣು, ಕಾಗದ ಮತ್ತು ಎಲೆಗಳು, ಬಟ್ಟೆಗಳು ಮತ್ತು ವೇಷಭೂಷಣಗಳು, ಎಲ್ಲವೂ ಸ್ವಾಭಾವಿಕವೆನಿಸುವ ಭಾವನೆಯನ್ನು ಉಂಟು ಮಾಡುತ್ತದೆ.



ವಿಭಿನ್ನ ಪರಿಕಲ್ಪನೆಗಳನ್ನು ಉತ್ತಮವಾಗಿ ತಿಳಿದುಕೊಳ್ಳಲು ಬೋಧನಾ ಕಲಿಕಾ ಸಾಮಗ್ರಿಗಳನ್ನು ರಚಿಸಲು ಈ ಕಾರ್ಯಕ್ರಮವು ಸಹಾಯಮಾಡುತ್ತದೆ. ಮುಖ್ಯವಾಗಿ, ಈ ಎಲ್ಲಾ ಪ್ರಕ್ರಿಯೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾ ಮಕ್ಕಳು ತಮ್ಮನ್ನು ತಾವು ಸಂಪೂರ್ಣವಾಗಿ ತೊಡಗಿಸಿಕೊಳ್ಳುತ್ತಾರೆ. ವಿಭಿನ್ನ ವಿಷಯಗಳೊಂದಿಗೆ ಸರಿಯಾಗಿ ಗುರುತಿಸಿಕೊಳ್ಳುವುದರಿಂದ ಮತ್ತು ಒಳಗೊಳ್ಳುವುದರಿಂದ ವಿವಿಧ ಹಂತಗಳಲ್ಲಿ ದೃಶ್ಯ ಮತ್ತು ಪ್ರದರ್ಶನ ಕಲಾ ಪ್ರಕಾರಗಳ ಬಳಸುವಿಕೆಯು ಆಸಕ್ತಿದಾಯಕ ಮತ್ತು ಸಂತೋಷದಾಯಕವಾದ ರೋಮಾಂಚ ಕವಾತಾವರಣವನ್ನು ಸೃಷ್ಟಿಸುತ್ತದೆ. ಶಿಕ್ಷಣ ಶಾಸ್ತ್ರೀಯವಾಗಿಯೂ ಸಹ, ಕಲೆ–ಸಂಯೋಜಿತ ಕಲಿಕಾ ಕಾರ್ಯಕ್ರಮವು ಮಕ್ಕಳಿಗೆ ಕಲ್ಪಿಸಿಕೊಳ್ಳುವ ಮತ್ತು ವ್ಯಕ್ತಪಡಿಸುವ, ಅವರ ಸೃಜನಶೀಲತೆ ಮತ್ತು ಅಭಿವ್ಯಕ್ತಿಯನ್ನು ತೋರಿಸುವ, ಪರಿಕಲ್ಪನೆಗಳನ್ನು ಗ್ರಹಿಸುವ ಮತ್ತು ಅರ್ಥಮಾಡಿಕೊಳ್ಳುವ, ಸಂಬಂಧಿತ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಿಕೊಳ್ಳುವ ಮತ್ತು ಇನ್ನಿತರ ಹೆಚ್ಚಿನ ಅವಕಾಶಗಳನ್ನು ಒದಗಿಸುತ್ತದೆ. ಈಗ ಗುಣಮಟ್ಟದ ಶಿಕ್ಷಣವನ್ನು ಒದಗಿಸುವ ಸೂಕ್ತ ವಾತಾವರಣವನ್ನು ಸೃಷ್ಟಿಸಲು ಸರಿಯಾದ ತರಬೇತಿ, ಶೈಕ್ಷಣಿಕ ಕೊಡುಗೆ, ಮತ್ತು ಎಸ್‌ಸಿಇಆರ್‌ಟಿ ಮತ್ತು ಡಿಐಇಟಿಯ ಬೆಂಬಲದೊಂದಿಗೆ ಕಲೆ–ಸಂಯೋಜಿತ ಕಲಿಕಾ ಕಾರ್ಯಕ್ರಮದ ಶಿಕ್ಷಣಶಾಸ್ತ್ರವನ್ನು ರಾಜ್ಯದಾದ್ಯಂತ ಹೆಚ್ಚಿನ ಶಾಲೆಗಳಲ್ಲಿ ಅಭ್ಯಾಸ ಮಾಡಲಾಗುತ್ತಿದೆ.

ಗುಣಮಟ್ಟದ ಶಿಕ್ಷಣದಲ್ಲಿ ಚಹಕ್ ಮತ್ತೊಂದು ಆಸಕ್ತಿದಾಯಕ ಮತ್ತು ನವೀನ ಕೊಡುಗೆಯಾಗಿದೆ. ಮೊದಲ ಬಾರಿಗೆ ಶಾಲೆಗೆ ಬರುವ ಮಕ್ಕಳಿಗೆ ಸ್ಥಾನ ಮತ್ತು ಅಸ್ಮಿತೆ ದೊರೆಯಬೇಕು. ಶಾಲೆಯಲ್ಲೂ ಅವರು ತಮ್ಮ ಮನೆಯಲ್ಲಿ ಇರುವಂತೆ ಆರಾಮದಾಯಕ ಭಾವವನ್ನು ಅನುಭವಿಸಬೇಕು. ಶಾಲೆಯ ವಾತಾವರಣವು ಅನುಕೂಲಕರವಾಗಿ, ಸ್ನೇಹಮಯವಾಗಿ ಮತ್ತು ಸಂತೋಷದಾಯಕವಾಗಿ ಮಕ್ಕಳನ್ನು



ನಿಕಟವಾಗಿ ತೊಡಗಿಸಿಕೊಳ್ಳುವಂತೆ ಮಾಡಬೇಕು. ಈ ಕಾರ್ಯಕ್ರಮವು ‘ಕಲಿಕೆಯನ್ನು ಸಾಧ್ಯವಾಗಿಸಲು ಸಿದ್ಧರಾದ ಮಕ್ಕಳು ಮತ್ತು ಸಿದ್ಧವಾದ ಶಾಲೆ’ಎಂಬ ವಸ್ತು, ವಿಷಯದ ಮೇಲೆ ಆಧಾರಿತವಾಗಿದೆ. ಶಿಕ್ಷಕರು ಮಾತ್ರ ಕಲಿಕೆಯನ್ನು ಸಾಧ್ಯವಾಗಿಸಬಲ್ಲರು ಎಂಬ ನಂಬಿಕೆಯನ್ನು ಚಹಕ್ ಹುಸಿಗೊಳಿಸುತ್ತಿದೆ. ಈ ಕಾರ್ಯಕ್ರಮವು ಪ್ರತಿಮಗುವಿನಲ್ಲೂ ಕಲಿಯುವ ಸಾಮರ್ಥ್ಯ ಇರುತ್ತದೆ ಮತ್ತು ಕಲಿಯಲು ಸಿದ್ಧವಾಗಿರುತ್ತದೆ ಎಂಬ ಅಂಶವನ್ನು ಬಲವಾಗಿ ನಿರೂಪಿಸುತ್ತದೆ. ಈ 24 ದಿನಗಳ ಕಾರ್ಯಕ್ರಮವು ಹೊಸ ಶೈಕ್ಷಣಿಕ ವರ್ಷದ ಆರಂಭದಲ್ಲಿ, ಹೊಸ ಪ್ರವೇಶಾತಿಗಳೊಂದಿಗೆ ಪ್ರಾರಂಭವಾಗುತ್ತದೆ. ಮಕ್ಕಳ ಸನ್ನಿವೇಶ, ಹಿನ್ನೆಲೆ ಮತ್ತು ಹಿಂದಿನ ಅನುಭವಗಳನ್ನು ಗಮನದಲ್ಲಿಟ್ಟುಕೊಂಡು, ಯಾವುದೇ ಹಿಂಜರಿಕೆಯಿಲ್ಲದೆ ಅವರು ಶಾಲಾ ಪರಿಸರಕ್ಕೆ ಒಗ್ಗಿಕೊಳ್ಳುವಂತೆ ಕಾರ್ಯಕ್ರಮವನ್ನು ವಿನ್ಯಾಸಗೊಳಿಸಲಾಗಿದೆ.

ಚಹಕ್‌ನ ಚಟುವಟಿಕೆಗಳು ಮಕ್ಕಳಿಗೆ, ವಿಶೇಷವಾಗಿ ಮೊದಲ ಬಾರಿ ಶಾಲೆಗೆ ಬರುವ ಮಕ್ಕಳಿಗೆ, ಶಾಲೆಯು ಒಂದು ಹಿತವಾದ, ಸ್ವಾಗತಪೂರ್ಣವಾದ ಮತ್ತು ಭಯ ಮುಕ್ತವಾದ ಸ್ಥಳವಾಗಿದೆ ಎಂದು ಖಚಿತಪಡಿಸಿಕೊಳ್ಳುವ ಉದ್ದೇಶವನ್ನು ಹೊಂದಿದೆ. ಇದು ಎಂದಿಗೂ



ಶಾಲಾ ಪೂರ್ವ ಶಿಕ್ಷಣವನ್ನು ಪಡೆಯದ, ನಿರ್ಲಕ್ಷ್ಯಕ್ಕೆ ಒಳಗಾದ ಹಿನ್ನೆಲೆಯಿಂದ ಬಂದಿರುವ ಮತ್ತು ಐದು ಅಥವಾ ಆರನೇ ವಯಸ್ಸಿನಲ್ಲಿ ಅಗತ್ಯವಿರುವ ಮಾನಸಿಕ ಬೆಂಬಲವನ್ನು ಹೊಂದಿರದ ಮಕ್ಕಳ ಕೊರತೆಯನ್ನು ಪೂರೈಸಿ ಉಳ್ಳ ಮಕ್ಕಳೊಂದಿಗಿನ ಅವರ ಅಂತರವನ್ನು ಕಡಿಮೆ ಮಾಡಲು ಪ್ರಯತ್ನಿಸುತ್ತದೆ.

ಶಾಲೆಯ ಪ್ರಕ್ರಿಯೆಯನ್ನು ಹಾಗೂ ಶಿಕ್ಷಕರು ಮಕ್ಕಳನ್ನು ಅರ್ಥ ಮಾಡಿಕೊಳ್ಳಲು ಮತ್ತು ಅವರನ್ನು ತಮ್ಮ ಮಕ್ಕಳೆಂದೇ ಭಾವಿಸುವಂತೆ ಮಾಡಲು ಚಹಕ್ ಸುಲಭಗೊಳಿಸುತ್ತದೆ. ಕಾರ್ಯಕ್ರಮವು ಕಥೆ ಹೇಳುವಿಕೆ, ಆಟಗಳು ಮತ್ತು ಕ್ರೀಡೆಗಳು, ಸೂಕ್ತ ಭಾವಾಭಿನಯದೊಂದಿಗೆ ಪದ್ಯಗಳ ಪಠನೆ ಮತ್ತು ವಾಚನ, ನಟನೆ, ಹಾಡುಗಾರಿಕೆ, ನೃತ್ಯ ಮತ್ತು ನಾಟಕ, ಮಣ್ಣು, ಮರಳು, ಕ್ರೇಯಾನ್‌ಗಳು ಮತ್ತು ಬಣ್ಣಗಳೊಂದಿಗೆ

ಆಟವಾಡುವಿಕೆ, ರೇಖಾಚಿತ್ರ ಬಿಡಿಸುವಿಕೆ, ಚಿತ್ರಕಲೆ, ಪ್ರಕೃತಿ ವಿಹಾರದ ಮೂಲಕ ತಮ್ಮ ಪರಿಸರ ಮತ್ತು ಸುತ್ತಮುತ್ತಲಿನ ಪ್ರದೇಶಗಳನ್ನು ಗಮನಿಸುವುದು ಮತ್ತು ಗುರುತಿಸುವುದು, ಇತ್ಯಾದಿಗಳನ್ನು ಒಳಗೊಂಡಿರುತ್ತದೆ.

ಬಿಹಾರ ಬಾಲಭವನದ ಕಿಲ್ಕಾರಿ, ಬಿಹಾರ ಶಿಕ್ಷಣ ಯೋಜನೆ, ಬಿಹಾರದ ಎಸ್‌ಸಿಇಆರ್‌ಟಿ ಮತ್ತು ಯೂನಿಸೆಫ್‌ನ ಬೆಂಬಲದೊಂದಿಗೆ ಚಹಕ್ ಅನ್ನು ರಾಜ್ಯದ ಎಲ್ಲಾ ಶಾಲೆಗಳಲ್ಲಿ ಅಳವಡಿಸಲಾಗಿದೆ. 1 ಮತ್ತು 2ನೇ ತರಗತಿಯ ಶಿಕ್ಷಕರಿಗೆ ತರಬೇತಿ ನೀಡಲಾಗಿದೆ. ಶಿಕ್ಷಕರು ಕೇವಲ ತರಬೇತಿಯನ್ನು ಆನಂದಿಸುವುದು ಮಾತ್ರವಲ್ಲದೆ ಬದಲಾವಣೆಯನ್ನು



ತರಲು ತಮ್ಮ ಶಾಲೆಗಳಲ್ಲಿ ಸಂತೋಷದಾಯಕ, ವಿನೋದದ ಮತ್ತು ಸ್ನೇಹಪರ ವಾತಾವರಣವನ್ನು ಸೃಷ್ಟಿಸುತ್ತಿದ್ದಾರೆ.

ಮತ್ತೊಂದು ಗುಣಮಟ್ಟದ ಉಪಕ್ರಮ ಕಾರ್ಯಕ್ರಮವೆಂದರೆ ಕ್ರೀಡೆ ಆಧಾರಿತ ಕಲಿಕೆ– 'ಖೇಲೆ ಪಡೆ ಬಡೆ ಬಿಹಾರ'. ಪ್ರತಿಯೊಂದು ಮಗುವು ಸಾಕಷ್ಟು ಸಾಮರ್ಥ್ಯವನ್ನು ಹೊಂದಿರುತ್ತದೆ ಮತ್ತು ಸೃಜನಶೀಲ ಶಕ್ತಿ ಮತ್ತು ಚೈತನ್ಯದಿಂದ ತುಂಬಿರುತ್ತದೆ ಎಂಬುದು ಸತ್ಯ. ಮಕ್ಕಳು ಸ್ವಭಾವತಃ ಕುತೂಹಲ ಮತ್ತು ಜಿಜ್ಞಾಸೆಯನ್ನು ಹೊಂದಿರುತ್ತಾರೆ, ಸಹಕಾರ ಮತ್ತು ಸಹಾಯ ಮಾಡುವ ಮನೋಭಾವವನ್ನು ಹೊಂದಿದ್ದು ನೈಸರ್ಗಿಕವಾಗಿ ನಾಯಕತ್ವದ ಗುಣ ಹೊಂದಿರುತ್ತಾರೆ. ಅವರು ಯಾವುದೇ ಕೆಲಸವನ್ನು ತಮ್ಮ ಪೂರ್ಣಶಕ್ತಿ ಮತ್ತು ಸಾಮರ್ಥ್ಯದೊಂದಿಗೆ ತಮಗೆ ತೋಚಿದ ಹಾಗೆ ಮತ್ತು ತಮಗೆ ಬೇಕಾದ ಹಾಗೆ ಮಾಡಲು ಪ್ರಯತ್ನಿಸುತ್ತಾರೆ. ಅವರುಆಟವಾಡುವಾಗ, ಅವರ ಒಳಗೊಳ್ಳುವಿಕೆ ಮತ್ತು ಚಟುವಟಿಕೆಯನ್ನು ವೀಕ್ಷಿಸುವ ಮೂಲಕ ಯಾರಾದರೂ ಅದನ್ನು ಅರಿತುಕೊಳ್ಳಬಹುದು. ಈ ಅರಿವಿನೊಂದಿಗೆ ಅವರ ಸಾಮರ್ಥ್ಯ ಮತ್ತು ಗುಣಗಳನ್ನು ಪರಿಣಾಮಕಾರಿಯಾಗಿ ಕೇಂದ್ರೀಕರಿಸುವ ಮೂಲಕ ಅವರ ಕಲಿಕೆಯನ್ನು ವರ್ಧಿಸಬಹುದು ಎನಿಸುತ್ತದೆ.

ಕ್ರೀಡೆಗಳು ಮತ್ತು ಆಟಗಳು ಮಕ್ಕಳ ಉತ್ಸಾಹ, ಹುಮ್ಮಸ್ಸು ಮತ್ತು ಒಳಗೊಳ್ಳುವಿಕೆಯ ಸಂಪೂರ್ಣ ಸಾಮರ್ಥ್ಯವನ್ನು ತೋರಿಸಲು ಪ್ರತಿಯೊಂದು ಅವಕಾಶವನ್ನು ಒದಗಿಸುತ್ತವೆ. ಈ ಕಲ್ಪನೆಯೊಂದಿಗೆ ರಾಜ್ಯದಲ್ಲಿ ಕ್ರೀಡೆ ಆಧಾರಿತ ಕಲಿಕೆಯ ಕಾರ್ಯಕ್ರಮವಾದ 'ಖೇಲೆ ಪಡೆ ಬಡೆ ಬಿಹಾರ' ಇದನ್ನು ಪ್ರಾರಂಭಿಸಲಾಗಿದೆ. ಗಣಿತ, ವಿಜ್ಞಾನ ಮತ್ತು ಭಾಷಾ ಕೌಶಲ್ಯಗಳಲ್ಲಿನ ಪರಿಕಲ್ಪನೆಗಳೊಂದಿಗೆ ಮಕ್ಕಳಿಗೆ ಪ್ರಿಯವಾದ ವಿವಿಧ ಮಕ್ಕಳ ಸ್ನೇಹಿ ಆಟಗಳನ್ನು ಸರಿಯಾಗಿ ಸಂಯೋಜಿಸಿರುವುದು ಈ ಕಾರ್ಯಕ್ರಮದ ಸೌಂದರ್ಯವಾಗಿದೆ. ಕ್ರೀಡೆ ಆಧಾರಿತ ಕಲಿಕೆಯ ವಸ್ತು ವಿಷಯವು 'ಅಭಿವೃದ್ಧಿಗಾಗಿ ಕ್ರೀಡೆ'ಎಂಬುದಾಗಿದೆ. ಇದರಲ್ಲಿ ವಿವಿಧ ವಿಭಾಗಗಳ ಬಹುತೇಕ ಎಲ್ಲಾ ಆಟಗಳು ಮತ್ತು ಕ್ರೀಡಾ ಚಟುವಟಿಕೆಗಳನ್ನು ಸೇರಿಸಲಾಗಿದೆ. ಆಟಗಳನ್ನು ಯಾವ ಮಟ್ಟಿಗೆ ವಿನ್ಯಾಸಗೊಳಿಸಲಾಗಿದೆ ಮತ್ತು ಮಾರ್ಪಡಿಸಲಾಗಿದೆ ಎಂದರೆ ಹೊರಾಂಗಣ ಆಟಗಳನ್ನು ಕಡಿಮೆ ಸ್ಥಳಾವಕಾಶವಿರುವ ಒಳಾಂಗಣದಲ್ಲಿ ಮತ್ತು ತರಗತಿಯ ಒಳಗೂ ಸಹ ಸುಲಭವಾಗಿ ಆಡಬಹುದು. ಇದು ಆರೋಗ್ಯ ಮತ್ತು ನೈರ್ಮಲ್ಯ, ಸ್ವಚ್ಛತೆ, ದೈಹಿಕ ಸಾಕ್ಷರತೆಯನ್ನೂ (ದೈಹಿಕ ಚಟುವಟಿಕೆಗಳನ್ನೂ) ಒಳಗೊಂಡಿದೆ. ಸ್ಥಳೀಯ ನಿರ್ದಿಷ್ಟ ಆಟಗಳ ಆಯ್ಕೆಗೂ ಅಗತ್ಯ ವ್ಯಾಪ್ತಿ ಮತ್ತು ಸ್ಪಂದನೆಯುಂಟು. ಮಕ್ಕಳು ತಮ್ಮ ಆಸಕ್ತಿ, ಸೃಜನಶೀಲತೆಯನ್ನು ತೋರಿಸಲು ಮತ್ತು ಆಟವಾಡುತ್ತಲೇ ಕಲಿಯಲು ಇದು ಅನುವು ಮಾಡಿಕೊಡುತ್ತದೆ.



ಇವು ರಾಜ್ಯದಲ್ಲಿ ಗುಣಮಟ್ಟದ ಶಿಕ್ಷಣದ ಬೇಡಿಕೆ ಮತ್ತು ಸವಾಲುಗಳನ್ನು ಪೂರೈಸಲು ಜಾರಿಯಲ್ಲಿರುವ ಕೆಲವು ಉಪಕ್ರಮಗಳಾಗಿವೆ. ಈ ಕಾರ್ಯಕ್ರಮಗಳ ಕಡಿಮೆ ವೆಚ್ಚ ಮತ್ತು ಸ್ಥಳೀಯ ಸಂಪನ್ಮೂಲ ಆಧಾರಿತ ಸ್ವಭಾವವು ಶಾಲೆಗಳು, ಶಿಕ್ಷಕರು, ಮಕ್ಕಳು ಮತ್ತು ಪೋಷಕರ ತೊಡಗಿಕೊಳ್ಳುವಿಕೆ ಮತ್ತು ಒಳಗೊಳ್ಳುವಿಕೆಯನ್ನು ಹೆಚ್ಚಿಸಿದೆ.

ಎಲ್ಲಕ್ಕಿಂತ ಮುಖ್ಯವಾಗಿ ಈ ಎಲ್ಲಾ ಕಾರ್ಯಕ್ರಮಗಳು ಸಮನ್ವಯ ಸ್ವಭಾವದ್ದಾಗಿದ್ದು, ಯಾವುದೇ ಅಡೆತಡೆಗಳನ್ನು ಲೆಕ್ಕಿಸದೆ ಎಲ್ಲರ ಒಳಗೊಳ್ಳುವಿಕೆ ಮತ್ತು ಭಾಗವಹಿಸುವಿಕೆಗೆ ಸಾಕಷ್ಟು ವ್ಯಾಪ್ತಿಯನ್ನು ಒದಗಿಸುತ್ತವೆ. ಸಹಜವಾಗಿ ಈ ಕಾರ್ಯಕ್ರಮಗಳು ಎಲ್ಲರಿಗೂ ಒಳಗೊಳ್ಳುವ ಅವಕಾಶ ಒದಗಿಸುವುದರಿಂದ ಅವು ಸುಲಭವಾದವು, ಆಸಕ್ತಿದಾಯಕವಾದವು ಮತ್ತು ಹೆಚ್ಚಿನ ಶ್ರಮವನ್ನು ಬೇಡುವುದಿಲ್ಲ. ಅವುಗಳ ಪ್ರಭಾವವು ಹೆಚ್ಚು ಸಾಂದರ್ಭಿಕ ಮತ್ತು ನೈಜವಾದದ್ದು ಮತ್ತು ಅವುಗಳನ್ನು ಪ್ರಾಯೋಗಿಕ ದತ್ತಾಂಶದೊಂದಿಗೆ ಸಹ ಹೋಲಿಸಲಾಗುವುದಿಲ್ಲ.

ಪ್ರತಿದಿನವೂ ಹೊಸ ಭರವಸೆ, ನಿರೀಕ್ಷೆ ಮತ್ತು ಅನುಭವಗಳಿಂದ ತುಂಬಿರುವ ಹೊಸ ದಿಗಂತವನ್ನು ತೆರೆಯುತ್ತದೆ. ತಮ್ಮ ಅನುಭವಗಳು ಮತ್ತು ಸಂದರ್ಭದ ಸಂಪನ್ಮೂಲಗಳ ಕೊಡುಗೆಯನ್ನು ನೀಡುವ ಮೂಲಕ ಈ ಕಾರ್ಯಕ್ರಮಗಳ ಪರಿಣಾಮಕಾರಿತ್ವವನ್ನು ಮತ್ತಷ್ಟು ಹೆಚ್ಚಿಸುವಲ್ಲಿ ಮಕ್ಕಳು ಪ್ರಮುಖ ಪಾತ್ರವಹಿಸುತ್ತಾರೆ. ಈ ಎಲ್ಲಾ ಕಾರ್ಯಕ್ರಮಗಳು ಸಮುದಾಯವನ್ನು ಹತ್ತಿರ ತರಲು ಅವಕಾಶಗಳನ್ನು ಒದಗಿಸುತ್ತವೆ ಮತ್ತು ಇಂದು ಅನೇಕ ಸ್ಥಳಗಳಲ್ಲಿ ಇದು ನಡೆಯುತ್ತಿದೆ.

● ಅನುವಾದಕರು: **ನಿವೇದಿತಾ ಬಿ ರುದ್ರೇಶ್** | ಪರಿಶೀಲಕರು: **ಟಿ ಎನ್ ವಾಸುದೇವಮೂರ್ತಿ**

**ಮನೋಜ್** ಪ್ರಸ್ತುತ ಬಿಹಾರದ ಭೋಜ್‌ಪುರದ ಭೇಲ್ಡುಮ್ರಾ, ಅರಾ, ಸರ್ಕಾರಿ ಶಾಲೆಯಲ್ಲಿ ಮುಖ್ಯ ಶಿಕ್ಷಕರಾಗಿದ್ದಾರೆ. ಅವರು ಭೋಜ್‌ಪುರದ ಪಿರೌಟಾದ ಡಿಐಇಟಿಯಲ್ಲಿ ಅತಿಥಿ ಅಧ್ಯಾಪಕರಾಗಿದ್ದಾರೆ ಮತ್ತು ಪ್ರಾಥಮಿಕ ತರಗತಿಗಳಿಗೆ ವಿಜ್ಞಾನ ಪುಸ್ತಕಗಳು; ಡಿ.ಈಐ.ಈಡಿ.ಗೆ ಪಠ್ಯಕ್ರಮ, ಮತ್ತು ಸ್ವ-ಕಲಿಕಾ ಸಾಮಗ್ರಿಗಳನ್ನು ಹಾಗೂ ಸೇವಾ ಪೂರ್ವ ಮತ್ತು ಸೇವಾನಿರತ ಶಿಕ್ಷಕರ ತರಬೇತಿಗೆ ಮಾದರಿಗಳನ್ನು ಅಭಿವೃದ್ಧಿಪಡಿಸುವ ಕೆಲಸದಲ್ಲಿ ಭಾಗಿಯಾಗಿದ್ದಾರೆ. ಅವರು ಬಿಹಾರದ ಎಸ್‌ಸಿಇಆರ್‌ಟಿ ಮತ್ತು ಬಿಹಾರ ಶಿಕ್ಷಣ ಪ್ರಾಜೆಕ್ಟ್ ಕೌನ್ಸಿಲ್‌ನ ತರಬೇತುದಾರರು, ವಿಷಯ ತಜ್ಞರು ಮತ್ತು ಬಿಹಾರದ ರಾಜ್ಯ ಸಂಪನ್ಮೂಲ ಗುಂಪಿನ ಸದಸ್ಯರಾಗಿದ್ದಾರೆ. ಅವರನ್ನು manojtripathy365@gmail.com ಇಲ್ಲಿ ಸಂಪರ್ಕಿಸಬಹುದು.